O.S. No.48/2016

PW1

**ದಿಃ 02-07-2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು ಶ್ರೀ ಎ ಜಿ ಪಿ ವಕೀಲರಿಂದಃ -ಪ್ರತಿವಾದಿ 1 ರಿಂದ 6 ರ ಪ**

ನಮ್ಮ ದಾವಾಸ್ತಿಯ ಸರ್ವೆ ನಂ. 35 ಅದು ಒಟ್ಟು 51 ಎಕರೆ 89 ಸೆಂಟ್ಸ ಇದ್ದು ಅದು ನಮ್ಮ ಮತ್ತು ಸರ್ಕಾರದ ಜಂಟಿ ಖಾತೆ ಇದ್ದು ಅದರಲ್ಲಿ 7 ಎಕರೆ ಮಾತ್ರ ನಮ್ಮ ಸ್ವಂತ ಆಸ್ತಿ ಇರುತ್ತದೆ ನಾವು ಅದನ್ನು ನಾರಾಯಣಭಟ್ಟರ ಮಗ ನರಸಿಂಹ ಭಟ್ಟರ ಹತ್ತಿರ ಖರೀದಿ ಮಾಡಿದ್ದೆವು ದಿಃ17-11-1959 ರಂದು ಒಡ್ಡರ ಯಂಕಪ್ಪರು ಖರೀದಿ ಮಾಡಿದ್ದರು. ಆ 51 ಎಕರೆಯಲ್ಲಿ ಪಶ್ಚಿಮ ದಿಕ್ಕಿಗೆ ನಮ್ಮದು 7 ಎಕರೆ ಬರುತ್ತದೆ ಅದರ ಚಕ್ಕುಬಂದಿ ಪೂಃಚಮನ ಸಾಬ್ ಹೊಲ, ಪಃಖಾಸಿಂಸಾಬ್ ಇವರ ಹೊಲ, ಉಃಕಣ್ಣಮ್ಮರ ನಿಂಗಪ್ಪರ ಹೊಲ ಮತ್ತು ದಃನಮ್ಮದೇ ಸ್ವಂತ ಹೊಲ ಇರುತ್ತದೆ. ಈಗ ನಾನು 7 ಎಕರೆಗೆ ಚಕ್ಕುಬಂದಿ ಹೇಳಿದ್ದೇನೆ. ನಾನು ಸುಳ್ಳು ಚಕ್ಕುಬಂದಿ ಹೇಳುತ್ತಿದ್ದೇನೆ ಮತ್ತು ಆ 51 ಎಕರೆಯಲ್ಲಿ ನನ್ನ ಜಮೀನು ಎಲ್ಲಿ ಬರುತ್ತದೆ ಅಂತಾ ನನಗೆ ಗೊತ್ತೆ ಇಲ್ಲವೆಂದರೆ ಸರಿಯಲ್ಲ. ನಾವು ನಮ್ಮ 7 ಎಕರೆಯನ್ನು ಅಳತೆ ಮಾಡಿ ಹದ್ದುಬಸ್ತು ಮಾಡಿಕೊಡಿ ಅಂತಾ ಕೇಳಿದ್ದೇವೆಂದರೆ ಸರಿ. ಆ 51 ಎಕರೆಯಲ್ಲಿ ನಮ್ಮ ಜಮೀನು ಎಲ್ಲಿ ಬರುತ್ತದೆಂತಾ ನಮಗೆ ಗೊತಿತಲ್ಲದ ಕಾರಣ ಅಳತೆ ಮಾಡಿಸಲು ಕೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಜಮೀನಿನಲ್ಲಿ ನಾವು ವ್ಯವಸಾಯ ಮಾಡುತ್ತೇವೆ ಮತ್ತು ಕಲ್ಲುಬಂಡೆ ಮೇಲೆ ಕಾಳು ಒಣಗಿಸುತ್ತೇವೆ. ಪೂರ್ತಿ 51 ಎಕರೆ ಕಲ್ಲುಗುಡ್ಡ ಇದ್ದು ಅದರಲ್ಲಿ ವ್ಯವಸಾಯ ಮಾಡಲು ಬರುವುದಿಲ್ಲವೆಂದರೆ ಸರಿಯಲ್ಲ. ನಿಪಿ-1 ರಂತೆ ನಾವು ದಾವಾಸ್ತಿಯನ್ನು ಖರೀದಿಸಿದ್ದೇವೆ. ನಿಪಿ-1 ರಲ್ಲಿ ಸರ್ವೆ ನಂ. 47ರ ಪೈಕಿ ಅಂತಾ ಇದೆ. ಸಾಕ್ಷಿ ಮುಂದುವರೆದು 2007 ರಲ್ಲಿ ಅದರ ಸರ್ವೆ ನಂ. 47 ಇದ್ದದ್ದು 35 ಆಗಿದೆ ಅಂತಾ ಹೇಳುತ್ತಾರೆ. ದಾವಾಸ್ತಿಯನ್ನು ಖರೀದಿ ಮಾಡಿ 60 ವರ್ಷವಾಗಿದೆ ನಮ್ಮ ಜಮೀನು ಎಲ್ಲಿದೆ ಅಂತಾ ನಮಗೆ ಗೊತ್ತಿಲ್ಲವೆಂದರೆ ಸರಿಯಲ್ಲ.

ಪ್ರತಿವಾದಿ 1 ರಿಂದ 6 ರವರು ಸರ್ಕಾರಿ ಅಧಿಕಾರಿಗಳು ಎಂದರೆ ಸರಿ. ಪ್ರತಿವಾದಿ 7 ರಿಂದ 20 ರವರನ್ನು ಮೈನ್ಸ್ ಅಂಡ್ ಜ್ಯೂಯಲಜಿ ಇವರಿಗೆ ಲೀಸ್ ಕೊಟ್ಟಿದ್ದಾರೆ ಅದಕ್ಕೆ ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇವೆ. ಅವರಿಗೆ ನಮ್ಮ ಜಮೀನಿನಲ್ಲಿ ಲೀಜ್ ಕೊಟ್ಟಿಲ್ಲವೆಂದರೆ ಇಲ್ಲ ನಮ್ಮ ಜಮೀನಿನಲ್ಲಿ ಲೀಸ್ ಕೊಟ್ಟಿದ್ದಾರೆ ಅದಕ್ಕೆ ಪಕ್ಷಗಾರರನ್ನಾಗಿ ಮಾಡಿದ್ದೇವೆ. ನಮ್ಮ ಜಮೀನಿನಲ್ಲಿ ಅವರಿಗೆ ಲೀಸ್ ಕೂಡದಿದ್ದರೂ ಅವರಿಗೆ ನಮ್ಮ ಜಮೀನಿನಲ್ಲಿ ಲೀಸ್ ಕೊಟಿದ್ದಾರಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 51 ಎಕರೆಯಲ್ಲಿ ನಮ್ಮ ಜಮೀನು ಎಲ್ಲಿ ಬರುತ್ತದೆ ಅಂತಾ ನಿರ್ಧಿಷ್ಟ ಮಾಹಿತಿ ಇಲ್ಲದ ಕಾರಣ ನಮ್ಮ ಜಮೀನಿನಲ್ಲಿ ಕೊಟ್ಟಿರಬಹುದು ಎಂಬ ಆತಂಕದಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇವೆಂದರೆ ಸರಿಯಲ್ಲ. ಅದು ಕಲ್ಲುಕ್ವಾರಿಯಾಗಿದ್ದು ಅಲ್ಲಿ ವ್ಯವಸಾಯ ಮಾಡಲು ಯೋಗ್ಯವಾದ ಭೂಮಿ ಇಲ್ಲ ನಾವು ಅಲ್ಲಿ ವ್ಯವಸಾಯ ಮಾಡುತ್ತೇವೆ ಮತ್ತು ಗೊಬ್ಬರ ಕಾಳು ಶೇಖರಿಸಿದ್ದೇವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲುಃ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ ಕೇ ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಪನಹಳ್ಳಿ.